### 3

ಸಾಹಿತ್ಯವಲಯ ಮತ್ತು ಓದುಗ ವರ್ಗ ಅನುವಾದಗಳನ್ನು ಇನ್ನೂ ಗಂಭೀರವಾಗಿ ಪರಿಗಣಿಸಬೇಕು ಎನಿಸುತ್ತದೆ. ಪ್ರಾಚೀನ ಸಾಹಿತ್ಯಗಳ (ಅಥವಾ **classics**ಗಳ) ಅನುವಾದಗಳನ್ನು ನಾವು ಮೂಲ ಕೃತಿಗಳಂತೆಯೇ ಪರಿಗಣಿಸಿದ್ದೇವೆ ಮತ್ತು ಅವೆಲ್ಲವೂ ನಮ್ಮ ಓದಿನ ಭಂಡಾರವನ್ನು ಶ್ರೀಮಂತಗೊಳಿಸಿವೆ. ಆದರೆ, ಇತರ ಮತ್ತು ಇತ್ತೀಚಿನ ಸಾಹಿತ್ಯದ ಅನುವಾದಗಳು ಅಷ್ಟು ಪ್ರಚಲಿತವಾಗುತ್ತಿಲ್ಲ. ಅದಕ್ಕೆ ಕಾರಣ ಬಹುಶಃ ಅನುವಾದಗಳು ಮೂಲ ಕೃತಿಯ ಅನುಭೂತಿಯನ್ನು ಸಂಪೂರ್ಣ ಕೊಡಲು ಸಾಧ್ಯವಾಗದೇ ಹೋಗುತ್ತಿರುವುದು ಎಂದು ನನ್ನ ಅನಿಸಿಕೆ. ಮೂಲದ ಓದಿನ ಅನುಭೂತಿಯನ್ನು ಕೊಡಲು ಸಂಪೂರ್ಣ ಪ್ರಯತ್ನಿಸಿದರೂ ಅದು ಮೂಲದ ಆಸುಪಾಸಿನ ಪರಿಧಿಯಲ್ಲಿರುತ್ತದೆಯೇ ಹೊರತು ಕೇಂದ್ರವನ್ನು ಮುಟ್ಟುವುದು ಕಷ್ಟ ಸಾಧ್ಯವಾಗುತ್ತದೆ ಎಂಬುದು ವಾಸ್ತವ. ಬಹುಶಃ ಇದೇ ಕಾರಣಕ್ಕೆ ಓದುಗರಿಗೂ ಅನುವಾದಗಳು ಹೆಚ್ಚು ರುಚಿಸುವುದಿಲ್ಲ ಮತ್ತು ಸಾಹಿತ್ಯವಲಯದಲ್ಲಿಯೂ ಹೆಚ್ಚಿನ ಪ್ರಾಮುಖ್ಯತೆ ಪಡೆದಿಲ್ಲ. ಉತ್ತಮ ಕೃತಿಗಳ ಆಯ್ಕೆ ಮತ್ತು ಗುಣಮಟ್ಟದ ಅನುವಾದ ಪ್ರಯತ್ನಗಳು ಬಹುಶಃ ಅನುವಾದ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರಬಲ್ಲವು.

### 4

ಕನ್ನಡಕ್ಕೆ ಇತರ ಭಾಷೆಗಳ ಅತ್ಯುತ್ತಮ ಕೃತಿಗಳು, ವಿವಿಧ ಪ್ರಕಾರಗಳ ಕೃತಿಗಳು ಅನುವಾದಗೊಳ್ಳಬೇಕು ಮತ್ತು ಇನ್ನೂ ಮುಖ್ಯವಾಗಿ ಕನ್ನಡದ ಅತ್ಯುತ್ತಮ ಕೃತಿಗಳು ಇತರ ಭಾಷೆಗಳಿಗೆ, ಮುಖ್ಯವಾಗಿ ಆಂಗ್ಲ ಭಾಷೆಗೆ ಅನುವಾದಗೊಳ್ಳಬೇಕು. ಇದು ಕನ್ನಡದ ತುರ್ತಾಗಿದೆ. ಉತ್ತಮ ಭಾಷಾಂತರ ಕನ್ನಡದ ಕಂಪನ್ನು, ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಎಲ್ಲೆಡೆ ಪಸರಿಸಲು ಸಹಾಯಕ ಕೊಂಡಿಗಳಾಗುವ ಎಲ್ಲ ಸಾಮರ್ಥ್ಯವನ್ನೂ ಹೊಂದಿವೆ.

ಇದು ಸಾಧ್ಯವಾಗಲು ಈ ಕ್ಷೇತ್ರವು ಹೆಚ್ಚು ವಿಶ್ವಾಸಾರ್ಹವಾಗಬೇಕು. ಅಂದರೆ, ಅನುವಾದಿತ ಕೃತಿಯೊಂದು ನೈತಿಕ ಹಕ್ಕುಗಳನ್ನು ಪಡೆಯಬೇಕು, ಮೂಲಕ್ಕೆ ಚ್ಯುತಿಯಾಗದಂತೆ ಅನುರೂಪಗೊಳ್ಳಬೇಕು, ಕನ್ನಡದ ಸಂಸ್ಕೃತಿಗೆ ಸಂಪೂರ್ಣ ಅಪರಿಚಿತ ಎನಿಸುವಷ್ಟು ಅಂತರವನ್ನು ಹೊಂದಬಾರದು ಮತ್ತು ಮುಖ್ಯವಾಗಿ ಭಾವಕ್ಕೆ ತಕ್ಕ ಭಾಷೆಯ ಪ್ರಯೋಗವಾಗಬೇಕು.

### 5

ಉತ್ತಮ ಕೃತಿಗಳು, ಉತ್ತಮ ಅನುವಾದಗಳಿಗೆ ಹೆಚ್ಚಿನ ಓದುಗರು ಇದ್ದೇ ಇದ್ದಾರೆ. ಆಗಲೇ ಹೇಳಿದಂತೆ ಅನುವಾದವು ಉತ್ತಮವಾಗಿದ್ದರೆ ಓದುಗ ವಲಯ (ಅಥವಾ ಬೇಡಿಕೆ) ಇದ್ದೇ ಇದೆ. ಉದಾಹರಣೆಗೆ, ನನ್ನ ಕೆಲವು ಭಾಷಾಂತರಗಳನ್ನು ಒಂದೇ ದಿನದಲ್ಲಿ ಓದಿ ಮುಗಿಸಿದ್ದೇವೆ ಎಂದು ಹೇಳಿರುವವರೂ ಇದ್ದಾರೆ, ಇನ್ನು ಕೆಲವನ್ನು ಸಂಪೂರ್ಣ ಓದಲು ಸಾಧ್ಯವಾಗಲೇ ಇಲ್ಲ ಎಂದೂ ಹೇಳಿದವರಿದ್ದಾರೆ. ಇಂತಹ ಪುಸ್ತಕಗಳಿಗೆ ಹೆಚ್ಚು ಬೇಡಿಕೆ, ಇಂತಹವಕ್ಕೆ ಇಲ್ಲ ಎಂಬ ಯಾವ ಕಟ್ಟಳೆ ಇಲ್ಲ. ಉತ್ತಮ ಕೃತಿಗಳ ಆಯ್ಕೆ ಮತ್ತು ಗುಣಮಟ್ಟದ ಅನುವಾದವು ಓದುಗರನ್ನು ಖಂಡಿತ ಆಕರ್ಷಿಸುತ್ತದೆ.

### 6

ಬಹುಭಾಷಾ ಸೊಗಡಿನ ಬಹುತ್ವವನ್ನು ಹೊಂದಿರುವ ಭಾರತದಲ್ಲಿ ಕೃತಿಗಳು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ನೇರ ಅನುವಾದಗೊಳ್ಳುವುದು ಕೊಂಚ ಸವಾಲಿನ ಕೆಲಸವೇ ಹೌದು. ಇಂತಹ ಸಂದರ್ಭದಲ್ಲಿ ಎಲ್ಲ ಭಾಷೆಗಳ ಸೇತುವೆಯಾಗಿರುವ ಇಂಗ್ಲಿಷ್ ಭಾಷೆಯು ಸಹಾಯಕ್ಕೆ ನಿಲ್ಲುತ್ತದೆ. ಹಾಗಾಗಿ, ಅನುವಾದದ ಅನುವಾದವು ಸಹಜವಾಗಿಯೇ ಹೆಚ್ಚಾಗಿರುತ್ತದೆ. ಅನುವಾದಕರ ನೈಪುಣ್ಯತೆ ಇಲ್ಲಿ ಮುಖ್ಯವಾಗಿರುತ್ತದೆ. ಒಳ್ಳೆಯ ಅನುವಾದಿತ ಕೃತಿಯಿಂದ ಯಾವುದೇ ರೀತಿಯ